ಸರ್ಕಾರದ ನಿಯಮ. ಆರಂಭದಲ್ಲೇ ಸರ್ಕಾರಿ ನಿಯಮಗಳನ್ನು ಮುರಿಯುವುದು ಸರಿಯಲ್ಲ ನೋಡು!" ಎಂದು ಮುದುಕಿ ಅವನನ್ನು ಅಲ್ಲೇ ಬಿಟ್ಟು ಹೊರಟುಹೋದಳು.

ಮುದುಕಿ ಕೊಂಚ ಸಡಿಲವೆಂದು ಅವನಿಗನ್ನಿಸಿದರೂ ಅವನು ಆ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ. ಅತೀ ಕಾಳಜಿ ತೋರಿಸುತ್ತಿರುವ ವಾತ್ಸಲ್ಯಮಯಿ ನಿರುಪದ್ರವಿ ಮುದುಕಿ ಎಂದು ತೀರ್ಮಾನಿಸಿದ. ಬಹುಶಃ ಒಬ್ಬನೇ ಮಗನನ್ನು ಯುದ್ಧದಲ್ಲೋ, ಇಲ್ಲ ಅಪಘಾತದಲ್ಲೋ ಕಳೆದುಕೊಂಡು ಹೀಗಾಗಿರಬೇಕು, ಪಾಪ.

ತನ್ನ ಕೆಲಸಗಳನ್ನೆಲ್ಲಾ ಮುಗಿಸಿ, ಬಿಲ್ಲಿ ವೀವರ್ ಮೆಟ್ಟಿಲುಗಳಿಂದ ಜಿಗಿಯುತ್ತಾ ಕೆಳಗೆ ಹೋದ. ಮುದುಕಿ ಕಾಣಿಸದಿದ್ದರೂ ಬೆಂಕಿ ಗೂಡಿನಲ್ಲಿ ಕಟ್ಟಿಗೆಗಳು ಜೋರಾಗಿ ಉರಿಯುತ್ತಿದ್ದವು. ಡ್ಯಾಶುಂಡ್ ನಾಯಿ ಅವನು ಹಿಂದೆ ನೋಡಿದ್ದ ಭಂಗಿಯಲ್ಲೇ ಸುತ್ತಿಕೊಂಡು ಮಲಗಿತ್ತು. ಕೋಣೆಯಲ್ಲಿನ ಉಷ್ಣತೆ ಹಿತವಾಗಿತ್ತು. "ಆಹಾ! ಎಂತಾ ಅದೃಷ್ಟ ನನ್ನದು!" ಎಂದು ಎರಡೂ ಕೈಗಳನ್ನು ಉಜ್ಜುತ್ತಾ ಬಿಲ್ಲಿ ತನ್ನಷ್ಟಕ್ಕೆ ಹೇಳಿಕೊಂಡ.

ರಿಜಿಸ್ಟರ್ ಪುಸ್ತಕ ಪಿಯಾನೋದ ಮೇಲೆ ತೆರೆದುಕೊಂಡಿದ್ದ ಹಾಗೇ ಇತ್ತು. ಬಿಲ್ಲಿ ಅದರಲ್ಲಿ ತನ್ನ ಹೆಸರು ವಿಳಾಸ ನಮೂದಿಸಿ ಕೆಳಗೆ ತನ್ನ ಸಹಿಯನ್ನು ಹಾಕಿದ. ಅವನು ಸಹಿ ಹಾಕಿದ ಪುಟದಲ್ಲಿ ಅವನ ಹೆಸರಿನ ಮೇಲೆ ಈ ಮೊದಲು ಎರಡೇ ಹೆಸರುಗಳು ದಾಖಲಾಗಿದ್ದವು. ಸಹಜ ಕುತೂಹಲದಿಂದ ಅವನು ಆ ಹೆಸರುಗಳನ್ನು ಓದಿದ. ಒಂದು, ಕಾರ್ಡಿಫ್ ನಗರದ ವಿಳಾಸದ ಕ್ರಿಸ್ಟೋಫರ್ ಮುಲ್ಹ್ ಹೊಲೆಂಡ್ ಮತ್ತು ಎರಡನೆಯದು ಬ್ರಿಸ್ಟಾಲಿನ ಗ್ರೆಗರಿ ಟೆಂಪಲ್.

'ಮುಲ್ಹ್ ಹೊಲೆಂಡ್!' ಅವನ ಹುಬ್ಬುಗಳು ಗಂಟಿಕ್ಕಿದವು. 'ಈ ಹೆಸರು ಎಲ್ಲೋ ಕೇಳಿದಂತಿದೆಯಲ್ಲ!' ಅವನು ತಲೆ ಕೆರೆದುಕೊಂಡ. ಹಳೆ ಸಹಪಾಠಿ? ತಂಗಿಯ ಬಾಯ್‌ಫ್ರೆಂಡ್ಸ್‌ಗಳಲ್ಲೊಬ್ಬ? ತಂದೆಯ ಗೆಳೆಯ? ಅವನಿಗೆ ಸಮಧಾನವಾಗಲಿಲ್ಲ. ಮತ್ತೆ ರಿಜಿಸ್ಟರ್ ನೋಡಿದ. ಕ್ರಿಸ್ಟೋಫರ್ ಮುಲ್ಹ್ ಹೋಲೆಂಡ್, 231, ಕ್ಯಾಥೇಡ್ರಾಲ್ ರೋಡ್, ಕಾರ್ಡಿಫ್. ಗ್ರೆಗರಿ ಟೆಂಪಲ್, 27, ಸೈಕಾಮೊರ್ ಡ್ರೈವ್, ಬ್ರಿಸ್ಟಾಲ್.

ಎರಡನೇ ಹೆಸರೂ ಅವನಿಗೆ ಎಲ್ಲೋ ಕೇಳಿದಂತಾಗಿತ್ತು!

"ಇಬ್ಬರೂ ಎಂತಾ **Charming** ಹುಡುಗರು ಅಂತಿಯಾ!" ಬಿಲ್ಲಿ ಹೌಹಾರಿ ಹಿಂದಕ್ಕೆ ತಿರುಗಿದ. ಮುದುಕಿ ಕೈಯಲ್ಲಿ ಒಂದು ಟೀ ಟ್ರೇಯನ್ನು ಹಿಡಿದು ನಿಂತಿದ್ದಳು.

"ಈ ಹೆಸರುಗಳನ್ನು ನಾನು ಈ ಮೊದಲು ಎಲ್ಲೋ ಕೇಳಿದಂತಿದೆ!" ಎಂದ.

"ಹೌದೇನು? **So interesting!**"

"ನಿಜವಾಗಲೂ! ಪೇಪರಿನಲ್ಲೂ ಇರಬಹುದು... ಅಂದ್ಹಾಗೆ ಇವರಿಬ್ಬರು ಹೆಸರು ಮಾಡಿದ ಕ್ರಿಕೆಟ್ ಅಥವ ಫುಟ್‌ಬಾಲ್ ಆಟಗಾರರಲ್ಲ ತಾನೆ?"

"ಹೆಸರು ಮಾಡಿದ ಆಟಗಾರರಲ್ಲವೆಂದು ಖಂಡಿತವಾಗಿಯೂ ಹೇಳಬಲ್ಲೆ. ಆದರೆ, ಇಬ್ಬರೂ ನಿನ್ನ ಹಾಗೆಯೇ ಆರೋಗ್ಯವಂತ ಸ್ಫುರದ್ರೂಪಿ ಹುಡುಗರು." ಟೀಪಾಯ್ ಮೇಲೆ ಟೀ ಟ್ರೇಯನ್ನಿಡುತ್ತಾ ಮುದುಕಿ ಹೇಳಿದಳು.

ಮತ್ತೊಮ್ಮೆ ರಿಜಿಸ್ಟರ್ ಮೇಲೆ ದೃಷ್ಟಿ ಹರಿಸುತ್ತಾ ಬಿಲ್ಲಿ ಹೇಳಿದ:

"ಇದರಲ್ಲಿ ಕಟ್ಟಕಡೆಯ **entry** ಎರಡು ವರ್ಷ ಹಳೆಯದು ಅಜ್ಜಿ!"

"ಒಹ್, ಹಾಗೇನು?"

"ಹೌದಜ್ಜಿ. ಇದಕ್ಕಿಂತ ಮೊದಲನೆಯದು ಮುಲ್ಹ್ ಹೊಲ್ಲೆಂಡನದು. ಅದು ಮೂರು ವರ್ಷ ಹಳೆಯದು!"